ಕನ್ನಡಪ್ರಭ

# ಜೈನ್ ವಿವಿ 7ನೇ ಘಟಿಕೋತ್ಸವ: 2488 ವಿದ್ಯಾರ್ಥಿಗಳಿಗೆ ಪದವಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ನಗರದಲ್ಲಿ ಇತ್ತೀಚೆಗೆ ನಡೆದ ಜೈನ್ ಯೂನಿವರ್ಸಿಟಿ 7ನೇ ಘಟಿಕೋತ್ಸವದಲ್ಲಿ ವಿವಿಧ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ಪದವಿ ಸೇರಿ 2488 ಮಂದಿಗೆ ಪದವಿ ಹಾಗೂ 58 ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಜೈನ್ ಯೂನಿವರ್ಸಿಟಿಯ ಅಧ್ಯಕ್ಷ ಡಾ. ಚೆನ್‌ರಾಜ್ ರಾಯ್‌ಚಂದ್, ಸಣ್ಣ ಆಲೋಚನೆಗಳು ದೊಡ್ಡ ಸಂಗತಿಗಳಿಗೆ ಕಾರಣವಾಗುತ್ತವೆ. ಯುವ ಪದವಿಧರರು ಇದನ್ನು ಸದಾ ನೆನಪಿಟ್ಟುಕೊಳ್ಳಬೇಕು. ಭವಿಷ್ಯದಲ್ಲಿ ಸಮಾಜದ ಒಳಿತಿಗೆ ತಮ್ಮದೇ ಕೊಡುಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಎಂ.ಫಿಲ್‌ನಲ್ಲಿ ಚಿನ್ನದ ಪದಕ ಪಡೆದ ಅಭಿಷೇಕ್ ವೆಂಕಟೇಶ್ವರ್ ತಮ್ಮ ಸಂಶೋಧನಾ ವಿಷಯ ಎಮೋಷನಲ್ ಇಂಟೆಲಿಜೆನ್ಸ್ ಕುರಿತು ಮಾತನಾಡಿ, ಎಮೋಷನಲ್ ಇಂಟೆಲಿಜೆನ್ಸ್ ಮತ್ತು ಶೈಕ್ಷಣಿಕ ಸಾಧನೆ ನಮ್ಮ ಜೀವನದ ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ ಸಂಶೋಧಕರು ಅಧ್ಯಯನ ವೇಳೆ ಭಾವನಾತ್ಮಕ ಅಂಶಗಳನ್ನು ಕಂಡುಕೊಳ್ಳುವುದೂ ಮುಖ್ಯವಾಗುತ್ತದೆ ಎಂದರು.

ಬಿಎ ಪದವಿಯಲ್ಲಿ ರ್‍ಯಾಂಕ್ ಪಡೆದ ಪಿ.ಬಿ. ಅಕ್ಷತಾ ಮಾತನಾಡಿ ಕಲೆ ಎನ್ನುವುದು ಸೃಜನಶೀಲವಾಗಿದ್ದು ತಮ್ಮ ಆವಿಷ್ಕಾರಕ್ಕೆ ನೆರವಾಗುತ್ತದೆ. ಈ ಕೋರ್ಸ್ ನನಗೆ ವ್ಯಕ್ತಿಯಾಗಿ ಬೆಳೆಯಲು ಮಾತ್ರ ಅಲ್ಲದೆ ವೃತ್ತಿಪರವಾಗಲೂ ನೆರವಾಗಿದೆ. ಪದವಿಯೇ ವಿಸ್ತಾರವಾದ ಅನುಭವ ನೀಡಿದ್ದು, ಇಂಟರ್ನ್‌ಶಿಪ್ ಉದ್ಯೋಗದ ಮಹತ್ವದ ಅನುಭವ ನೀಡಿದೆ ಎಂದು ತಮ್ಮ ಅನಿಸಿಕೆ ಹಂಚಿಕೊಂಡರು. ಜೈನ್ ಯೂನಿವರ್ಸಿಟಿಯ ಕುಲಾಧಿಪತಿ ಡಾ.ಸಿ.ಜಿ. ಕೃಷ್ಣದಾಸ್ ನಾಯರ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು. ಕುಲಪತಿ ಕರ್ನಲ್ ಡಾ.ಎನ್. ಸುಂದರರಾಜನ್, ಕುಲಸಚಿವ ಪ್ರೊ. ಎನ್.ವಿ.ಎಚ್. ಕೃಷ್ಣನ್, ಸಮ ಕುಲಪತಿ ಡಾ. ಸಂದೀಪ್ ಶಾಸ್ತ್ರಿ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ವಿವಿ ಸಿಬ್ಬಂದಿ, ಪೋಷಕರು ಉಪಸ್ಥಿತರಿದ್ದರು.